ಬರ್ಮಪ್ಪನ ಭಯದಿಂದಾಗಿ ಯಾರೂ ಸಹಾಯಕ್ಕೆ ಬರದಂತಾಗಿ ಹಲವು ತಿಂಗಳುಗಳ ಕಾಲ ಒಬ್ಬನೇ ಮರ ಕಡಿಯುತ್ತಾ ಹೋದ ಅವನಿಗೆ ಒಮ್ಮೆ ಗಿಡಮಣ್ಣನ ಕೆಲಸ ಕಂಡಿತು. ಗಿಡಮಣ್ಣನ ಕಣದ ಪಕ್ಕದಲ್ಲಿರುವ ದೊಡ್ಡೇರ ರಂಗಪ್ಪನ ಕಣದಲ್ಲಿ ಒಟ್ಟಿರುವ ಒಣಗಿದ ಮೆಣಸಿನಕಾಯಿ ರಾಸಿಯಿಂದ ಗಿಡಮಣ್ಣ ಜಲ್ಲೆಯಿಂದ ಯಾರು ಇಲ್ಲದ್ದು ನೋಡಿ ತನ್ನ ಕಣಕ್ಕೆ ಸಾಗಿಸುತ್ತಿದ್ದದ್ದು. ಸಾಕಷ್ಟು ಅನುಕೂಲಸ್ಥನಾಗಿದ್ದ ತನ್ನ ಗೌಡ ಗಿಡಮಣ್ಣನೇ ಕಳ್ಳತನಕ್ಕೆ ಇಳಿದಿದ್ದು ಕಂಡು ಹಳದಣ್ಣನ ಎದೆ ಸಣ್ಣದಾಯಿತು.

ಮಧ್ಯಾಹ್ನದಲ್ಲಿ ಕುಳಿತ ಅವನಿಗೆ ದೊಡ್ಡೇರ ರಂಗಪ್ಪನ ಕಣದ ಬಣವೆ ಬಳಿ ಏನೋ ಗೋಚರಿಸಿದಂತಾಗಿ ನೋಡಿದರೆ ಅಲ್ಲಿ ಗಿಡಮಣ್ಣನ ಹೆಂಡತಿ ರಂಗಪ್ಪನ ಜೊತೆ ಮೈಥುನದಲ್ಲಿ ತೊಡಗಿದ್ದಳು. 'ಗಿರಗಟ್ಲೆ...' ಬೀಡಿ ಎಸೆಯಲೇ... ಮೇಲೆ ಕುಂತ್ಗಂದಿರ್ತೀಯಲ್ಲಾ...' ಹೆಂಗೆ ಕಾಣ್ಸುತ್ತೇ...' ಎಂದ ಚಂದ್ರನಿಗೆ...' 'ಕೆಳಗಿದ್ದವರ ಆಟ ಮೇಲಿನೋರಿಗೆ ಕಾಣೋದು...' ಎಂದು ನಿಟ್ಟುಸಿರು ಬಿಟ್ಟ. ಬರುಬರುತ್ತಾ ಹಣೆಯ ವಿಭೂತಿಪಟ್ಟೆಗಳು ಹೊಳಪನ್ನು ಕಳೆದುಕೊಂಡು ಬೆವರುಕೂಡಿಕೊಂಡು ಮುಖದಲ್ಲಿ ಇಳಿಯಲು ತೊಡಗಿದ್ದು ಹಳದಣ್ಣನಲ್ಲಿ ಚಿಂತೆಗೀಡು ಮಾಡಿತ್ತು. ರೆಂಬೆಕೊಂಬೆಗಳು ಕಡಿಮೆಯಾಗುತ್ತಾ ಮರ ನೆಲಕ್ಕೆಮುಟ್ಟುತ್ತಾ ಬರುತ್ತಿದ್ದಂತೆ ಒಮ್ಮೆ ಕುಳಿತು ತನ್ನ ಮನೆಯ ಕಡೆ ನೋಡುತ್ತಿರುವಾಗ ಒಮ್ಮಲೆ ಒಳಗಿಂದ ಗಿಡಮಣ್ಣ ಹೊರಗೆ ಬರುತ್ತಾನೆ. ಒಳಗಿಂದ ಹಳದಕ್ಕ ನಗುತ್ತಾ ಹಿಂಬಾಲಿಸುತ್ತಾಳೆ... ಆಚೀಚೆ ನೋಡಿದ ಅವನು ಪುನಹ ಒಳಗೆ ಹೋಗುತ್ತಾ ಅವಳನ್ನು ತಬ್ಬಿ ಹಿಡಿಯುತ್ತಾನೆ. ಕುಳಿತ ತನ್ನ ದೇಹದೊಳಗೆ ಕೆಳಗಿನಿಂದ ಮೇಲೋ ಅಥವಾ ಮೇಲಿನಿಂದ ಕೆಳಗೋ ಎಂಬುದು ತಿಳಿಯದಂತೆ ಉಸಿರು ಗಿರಗಿರ ತಿರುಗತೊಡಗಿತು. ಗಿರಗಟ್ಲೆ ಬಿಟ್ಟರೂ ಗಿರಗಟ್ಲೆ ಹೆಸರಂಟಿದ್ದ ಹಳದಣ್ಣನ ಹಣೆಯ ಅಡ್ಡಡ್ಡವಿದ್ದ ವಿಭೂತಿ ಪಟ್ಟೆಗಳು ಜಳಜಳ ನೀರಲ್ಲಿ ಕರಗಿ ಹಣೆ ಬರಿದಾಯಿತು.

## ಕೃಷ್ಣ ಮಾಸಡಿ

ಲೇಖಕ, ಪತ್ರಕರ್ತ, ಸಿನಿನಿರ್ದೇಶಕ ಕೃಷ್ಣ ಮಾಸಡಿ ಶಿವಮೊಗ್ಗ ಜಿಲ್ಲೆ, ಹೊನ್ನಾಳಿ ತಾಲ್ಲೂಕಿನ ಮಾಸಡಿಯವರು. ಕತೆಗಳ ಬರವಣಿಗೆಯ ಜೊತೆಗೆ ಅವರು ದೀರ್ಘಕಾಲ ಸಾಕ್ಷ್ಯಚಿತ್ರ ಹಾಗೂ ಸಿನಿಮಾಗಳ ನಿರ್ದೇಶನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 'ಅವಸ್ಥೆ', 'ನಂಬಿಕೆಗಳು' ಅವರು ನಿರ್ದೇಶಿಸಿದ ಸಿನಿಮಾಗಳು.

'ಬೂತ', 'ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ', 'ಗ್ಯಾನಿ ಮತ್ತು ಗುಲಾಬಿ' ಅವರ ಕತೆಗಳ ಸಂಕಲನಗಳಾಗಿವೆ. 'ನಂಬಿಕೆಗಳು', 'ವೃತ್ತ' ಅವರ ಕಾದಂಬರಿಗಳಾದರೆ, 'ಸ್ವರ್ಗದ ಬಣ್ಣ' ಅವರ ಲೇಖನಗಳ ಸಂಗ್ರಹವಾಗಿದೆ. 30ಕ್ಕೂ ಹೆಚ್ಚು ಸಾಕ್ಷ್ಯಚಿತ್ರಗಳನ್ನು, 'ಜೇನುಗೂಡು' ಎಂಬ 39 ದೂರದರ್ಶನ ಸರಣಿಗಳು, ಯು.ಆರ್. ಅನಂತಮೂರ್ತಿ ಅವರ ಕಾದಂಬರಿ 'ಭಾರತೀಪುರ' ಆಧಾರಿತ ಅದೇ ಹೆಸರಿನ 13 ದೂರದರ್ಶನ ಸರಣಿಗಳನ್ನು ಅವರು ನಿರ್ದೇಶಿಸಿದ್ದಾರೆ.